## ಸೂಕ್ತಿಪ್ರಭ

**ಜ್ಯೋತಿ** ಎಲ್ಲ ಕಡೆಗಳಲ್ಲಿಯೂ ಇರುವುದು. ಆದರೆ ಮಹಾಪುರುಷರಲ್ಲಿ ಇದು ವ್ಯಕ್ತವಾಗುವುದು. ಮಹಾ ಪುರುಷರು ಒಂದು ಸ್ಫಟಿಕದಂತೆ. ಬೆಳಕು ನಿರಾತಂಕವಾಗಿ ಅದರ ಮೂಲಕ ಹೋಗಿ ಬರುವುದು. ಜೀವನ್ಮುಕ್ತನನ್ನು ಏತಕ್ಕೆ ನೀವು ಪೂಜಿಸಬಾರದು?

**ಸಾಧುಸಂಗ** ಒಳ್ಳೆಯದು. ನೀವು ಸಾಧುಗಳ ಸಮೀಪಕ್ಕೆ ಹೋದರೆ ಸಾಕು, ಪ್ರಯತ್ನಿಸದೆ ಇದ್ದರೂ ಸುತ್ತಲೂ ಪವಿತ್ರತೆ ತುಂಬಿ ತುಳುಕಾಡುವುದನ್ನು ನೋಡುವಿರಿ.

**ಈ** ಪ್ರಪಂಚವು ಹೃದಯದ ಸ್ವಲ್ಪ ಭಾಗವನ್ನು ಮಾತ್ರ ತುಂಬಬಲ್ಲುದು. ಹೃದಯವು ಪ್ರಪಂಚಕ್ಕೆ ಅತೀತ ವಾಗಿರುವುದನ್ನು ಆಶಿಸುವುದು.

**ಸ್ವಾರ್ಥತೆಯೇ** ಪ್ರತಿಯೊಬ್ಬನಲ್ಲಿಯೂ ಇರುವ ಪ್ರತ್ಯಕ್ಷ ರಾಕ್ಷಸ. ಪ್ರತಿಯೊಂದು ಬಗೆಯ ಸ್ವಾರ್ಥವೂ ಸೈತಾನನೇ. ನೀವು ಸ್ವಾರ್ಥತೆಯನ್ನು ಒಂದು ಕಡೆಯಿಂದ ಆಚೆಗೆ ಅಟ್ಟಿದರೆ ಇನ್ನೊಂದು ಕಡೆಯಿಂದ ದೇವರು ಬರುವನು. ಸ್ವಾರ್ಥತೆಯನ್ನು ತೆಗೆದುಹಾಕಿದ ಮೇಲೆ ದೇವರೊಬ್ಬನೇ ಉಳಿಯುವನು. ಕತ್ತಲೆ ಬೆಳಕು ಒಟ್ಟಿಗೆಯೇ ಇರಲಾರವು.

**ನಾನು** ಎಂಬ ಅಲ್ಪ ಅಹಂಕಾರವನ್ನು ಮರೆಯುವುದು ಸ್ವಸ್ಥವಾದ ಪರಿಶುದ್ಧ ಮನಸ್ಸಿನ ಸೂಚನೆ. ಆರೋಗ್ಯವಂತವಾದ ಮಗು ತನಗೆ ದೇಹವಿದೆ ಎಂಬುದನ್ನು ಮರೆಯುವುದು.

**ಸತ್ಯವು** ನಿಮ್ಮನ್ನು ಎಲ್ಲಿಗೆ ಒಯ್ದರೂ ನೀವು ಅಲ್ಲಿಗೆ ಹೋಗಿ. ನಿಮ್ಮ ಭಾವನೆಗಳ ಚರಮಸೀಮೆಯನ್ನು ಮುಟ್ಟಿ. ಹೇಡಿಗಳಾಗಬೇಡಿ.

**ಹೊಸ** ಆಚಾರಕ್ಕೆ ಅಂಜುವುದೇ ಮೌಢ್ಯಕ್ಕೆ ಮೂಲ. ಇದೇ ನರಕಕ್ಕೆ ಹಾದಿ. ಇದರಿಂದಲೇ ಮತಭ್ರಾಂತಿ ಹುಟ್ಟುವುದು. ಸತ್ಯವೇ ಸ್ವರ್ಗ, ಮತಭ್ರಾಂತಿಯೇ ನರಕ.

**ಪವಿತ್ರಾತ್ಮನಾಗಲು** ಸಾಧನೆ ಮಾಡುತ್ತಾ ನಾಶವಾದರೂ ಚಿಂತೆಯಿಲ್ಲ; ಸಾವಿರಾರು ವೇಳೆ ಮೃತ್ಯುವನ್ನು ಬೇಕಾದರೆ ಆಲಿಂಗಿಸು. ಎಂದಿಗೂ ನಿರಾಶನಾಗದಿರು.

**ನಿಮ್ಮ** ಜೀವನದ ಆದರ್ಶದ ಮೇಲೆ ನಿಮಗೆ ಶ್ರದ್ಧೆ ಇರಬೇಕು. ಕ್ಷಣಿಕ ಶ್ರದ್ಧೆಯಲ್ಲ. ಉದ್ವೇಗವಿಲ್ಲದ, ಎಂದಿಗೂ ಬಿಡದ, ಒಂದೇ ಸಮನಾಗಿರುವ ಶ್ರದ್ಧೆ ಇರಬೇಕು.

*ಸ್ವಾಮಿ ವಿವೇಕಾನಂದ*

## ಪ್ರಾರ್ಥನೆ

### ವಿಶ್ವಮಾನವ ಸ್ವಾಮಿ ವಿವೇಕಾನಂದ

ವಿಶ್ವಧರ್ಮದ ವಿಶ್ವಮಾನವ ಸ್ವಾಮಿ ವಿವೇಕಾನಂದ
ವಿಶಾಲ ಜಗತ್ತಿನ ವಿಶ್ವ ವಿಚಾರವಾದಿ ವಿವೇಕಾನಂದ
ಮಾನವತೆಯ ಮನುಜ ಕುಲವು ಮರೆಯದ ವಿವೇಕಾನಂದ
ವೀರ ವೇದಾಂತಿ ವಿಶ್ವಸತ್ಯ ವಿಶ್ವವಿಜೇತ ವಿವೇಕಾನಂದ

ವಿಶ್ವದ ಒಳಿತಿಗಾಗಿ ವಿಶ್ವಪ್ರೇಮ ಸಾರಲು ಬಂದ
ವಿಶ್ವ ವೇದಿಕೆಯ ಮೇಲೆ ವಿಶ್ವಾಸ ತೋರಲು ಬಂದ
ವಿಶ್ವ ಮಾನವರಿಗೆಲ್ಲ ವಿನಯದಿಂದ ವಿನಂತಿಸಿದ
ವಿಜಯ ಧ್ವಜ ಹಾರಿಸಿದ ವಿನೂತನ ವಿವೇಕಾನಂದ

ವಿಜಯದ ಹಾದಿಯಲ್ಲಿ ವಿಮೋಚನಾ ಶಕ್ತಿಯಿಂದ
ವಿಶ್ವ ಭವಿಷ್ಯದ ವಿಚಾರಧಾರೆಯಾಗಿ ವಿವೇಕಾನಂದನಾದ
ಶತಕೋಟಿಗೊಬ್ಬ ಭಾರತದ ಸಂಸ್ಕೃತಿಯ ಪ್ರತಿನಿಧಿಯಾದ
ವೀರ ಸಂನ್ಯಾಸಿ ವಿಶ್ವವಿದ್ಯಾ ವಿಶ್ವವಿದ್ವಾನ್ ವಿವೇಕಾನಂದ

ವೀರ ವ್ಯಾಪ್ತಿಯಾಗಿ ತೇಜೋದಯವಾಗಿ ಧರೆಗೆ ಬಂದ
ವಿಚಾರ ವೇದಾಂತಿಯ ಜ್ಞಾನದ ಬೆಳಕು ಎಲ್ಲೆಲ್ಲು ಚೆಲ್ಲಿದ
ಸತ್ಯ ಧರ್ಮ ಶಾಂತಿ ಪ್ರೇಮಕ್ಕಾಗಿ ತನ್ನನ್ನೇ ತ್ಯಜಿಸಿದ
ವಿಶೇಷ ವ್ಯಕ್ತಿ, ಶಾಂತ ಮೂರ್ತಿ, ವೀರಧ್ಯೇಯ ವಿವೇಕಾನಂದ

ವಿವೇಕವಿರುವ ಹೃದಯಗಳಲ್ಲಿ ವಿಶ್ವಶಾಂತಿ ನೀಡಿದ
ವಿನಯಪೂರ್ವಕ ಭಕ್ತಿಗೆ ಶರಣು ಶರಣು ಎಂದ
ಸರ್ವರಲ್ಲಿ ಸಮಾನತೆಗಾಗಿ ಸರ್ವಸ್ವವನ್ನೇ ಸಮರ್ಪಿಸಿದ
ವಿಶ್ವ ಶಾಂತಿರೂಪಿ ಪುರುಷಸಿಂಹ ವೀರ ಸಂತ ವಿವೇಕಾನಂದ

ವಿಶ್ವೇಶ್ವರಿಗೆ ವರವಾಗಿ ವಿಶ್ವ ಶಾಂತಿಯ ಸಂದೇಶ ತಂದ
ವಿಜಯಶಾಲಿಯಾಗಿ ವಿಹರಿಸಿ ವಿಶ್ವದಲ್ಲೇ ಪ್ರಸಿದ್ಧಿಯಾದ
ಜ್ಞಾನೋದಯದ ಚೈತನ್ಯ ಸಾರಥಿ ಸಮಸ್ತರ ಏಳಿಗೆಗಾಗಿ
ವೀರಾವೇಶದಿ ಬಂದ ವಿಶ್ವ ವೀರ ಕೇಸರಿ ಸ್ವಾಮಿ ವಿವೇಕಾನಂದ.

*(ರಚನೆ : ಹೆಚ್. ಷೌಕತ್ ಅಲಿ, ಮದ್ದೂರು)*